ಕರ್ನಾಟಕ ಸರ್ಕಾರ (ಸಿ.ಆರ್.ಪಿ.67)

| |
|---|
| ಹೇಳಿಕೆ ಹಾಳೆ<br>ಆರ್.ಪಿ.ಸಂಖ್ಯೆ 57<br>ನಮೂನೆ ಸಂಖ್ಯೆ 4<br>(ಸಿವಿಲ್ ) |

3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,
ಚಿಕ್ಕಬಳ್ಳಾಪುರ.

ಎಸ್.ಸಿ. ಸಂಖ್ಯೆ: **77-2020**

| | |
|---|---|
| PW | 09 |
| CW | 14 |

ಸಾಕ್ಷಿಯನ್ನು ಕರೆಸಿ ಸತ್ಯ ಭೋದನೆ ಮಾಡಿ ಪ್ರಮಾಣೀಕರಿಸಿದ ದಿನಾಂಕ **17.03.2022**

ಸಾಕ್ಷಿಯ ಹೆಸರು : ಚಂದ್ರ
ತಂದೆಯ/ಗಂಡನ ಹೆಸರು : ನಂಜಪ್ಪ
ವಯಸ್ಸು : 40 ವರ್ಷ
ಉದ್ಯೋಗ : ವ್ಯವಸಾಯ
ವಾಸಸ್ಥಳ : ಮರಸನಹಳ್ಳಿ

ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ

**1.** ಮೃತ ನವೀನ್ ಗೊತ್ತಿಲ್ಲ. ಚಾಸಾ -1 ರಿಂದ 6 ಗೊತ್ತಿಲ್ಲ. ಆರೋಪಿಗಳ ಪೈಕಿ 4 ನೇಅರೋಪಿ ಮಾತ್ರ ಗೊತ್ತು . ಉಳಿದವರು ಗೊತ್ತಿಲ್ಲ.

2. ಮರಸನಹಳ್ಳಿ ಗೆ ಹೋಗುವ ದಾರಿಯಲ್ಲಿ ತೋಟದಲ್ಲಿ ನನಗೆ ಒಂದೇ ಕಟ ್ಟಡದಲ್ಲಿ ನಾಲ್ಕು ಮನೆಗೆಗಳು ಇವೆ. ಸದರಿ ನಾಲ್ಕು ಮನೆಗಳನ್ನು ಬಾಡಿಗೆಗೆ ಕೊಟ್ಟಿದ್ದೇನೆ. 4 ನೇ ಆರೋಪಿ ನನ್ನ ಮನೆಯಲ್ಲಿ ಬಾಡಿಗೆಗೆ ಇದ್ದರು. ಸದರಿ ಮನೆಯಲ್ಲಿ 4 ನೇ ಆರೋಪಿ , ಗಂಡ ಮತ್ತು ಇಬ್ಬರು ಮಕ್ಕಳು ಇರುತ್ತಿದ್ದರು. 4 ನೇ ಆರೋಪಿ ಕೋರ್ಟ್ ನಲ್ಲಿ ಕೆಲಸಕ್ಕೆ ಹೋಗುತ್ತಿದ್ದಳು , ಯಾವ ಕೆಲಸ ಎಂದು ಗೊತ್ತಿಲ್ಲ. ಆಕೆಯ ಗಂಡ ನಮ್ಮ ಊರಿನಲ್ಲಿ ಗಾರೆ ಕೆಲಸ ಮಾಡುತ್ತಿದ್ದರು. ನನಗೆ 2,500/- ರೂ ಬಾಡಿಗೆ

*PW:09CW:14*

*ಕೊಡುತ್ತಿದ್ದರು. 4 ನೇ ಆರೋಪಿಯನ್ನು ಆಕೆಯ ಗಂಡ ಮೋಟಾರ್ ಸೈಕಲ್ ನಲ್ಲಿ ಕೆಲಸಕ್ಕೆ ಕರೆದುಕೊಂಡು ಹೋಗುತ್ತಿದ್ದ.*

*3. ಒಂದು ವರ್ಷದ ಹಿಂದೆ ಪೊಲೀಸರು ನನ್ನನ್ನು ಕರೆಸಿ ನಿಮ್ಮ ಮನೆಯಲ್ಲಿ ಬಾಡಿಗೆಗೆ ಇರುವ 4 ನೇ ಆರೋಪಿಯ ಜೊತೆ ಕೆಲಸ ಮಾಡುತ್ತಿರುವವರು ಕೊಲೆಯಾಗಿದ್ದಾರೆ ಎಂದು ತಿಳಿಸಿದರು. 4 ನೇ ಆರೋಪಿಯ ಜೊತೆ ಬಾಡಿಗೆಗೆ ಇದ್ದ ಮನೆಯವರು 4 ನೇ ಆರೋಪಿಯ ಬಗ್ಗೆ ನನಗೆ ಏನು ಹೇಳಿರುವುದಿಲ್ಲ. ನಾನು ಆಕೆಯ ಮನೆಗೆ ಹೋ ಗಿ ನೋಡುತ್ತಿರಲಿಲ್ಲ. ಪೊಲೀಸರು 4 ನೇ ಆರೋಪಿಯ ಸಹ್ಯೋದ್ಯೋಗಿಯನ್ನು ಯಾರು, ಯಾವ ಕಾರಣಕ್ಕಾಗಿ ಕೊಲೆ ಮಾಡಿದ್ದಾರೆ ಎಂದು ಹೇಳಲಿಲ್ಲ. ಪೊಲೀಸರಿಗೆ ನಾನು ಯಾವುದೇ ಹೇಳಿಕೆ ನೀಡಿರುವುದಿಲ್ಲ.*

***(ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರ ವಿನಂತಿಯ ಮೇರೆಗೆ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)***

*<u>ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ</u>*

***4)** ನಾನು ಈಗ ಓದಿ ಹೇಳಿದಂತೆ " ಈಗ್ಗೆ ಸುಮಾರು 1 ವರ್ಷದಿಂದ ಯಾರೋ ಒಬ್ಬ ………………………………………………………………………………… ……………………………………………………………………………,…………. ……………………………………………………… ಮೃತ ನವೀನ್ ಕುಮಾರ್ ರಮೊಂದಿಗೆ ಗಲಾಟೆ ಮಾಡಿಕೊಂಡಿರುವ ಆಸಾಮಿ ನವೀನ್ ಕುಮಾರ್ ವಕೀಲರನ್ನು ನೋಡಿದ್ದು ಪುನಃ ನೋಡಿದರೆ ಗುರುತಿಸುತ್ತೇನೆ. " ಎಂದು ಈಗ ಓದಿ ಹೇಳಿದ ರೀತಿ*

*PW:09CW:14*

*ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಸಾಕ್ಷಿಯ ಹೇಳಿಕೆಯನ್ನು ನಿಪಿ - **15** ಎಂದು ಗುರುತಿಸಲಾಯಿತು.*

*5**)** ನನಗೆ ಘಟನೆಯ ಬಗ್ಗೆ ಮಾಹಿತಿ ಇದ್ದು ಆ ಬಗ್ಗೆ ನಾನು ನಿಪಿ -15 ರಂತೆ ಪೊಲೀಸರಿಗೆ ಹೇಳಿಕೆ ನೀಡಿದ್ದರೂ ಸಹ ಈಗ ಆರೋಪಿತರೊಂದಿಗೆ ಶಾಮೀಲಾಗಿ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.*

*ಪಾಟೀ ಸವಾಲುಃ ಶ್ರೀ . ಹೆಚ್ . ಆರ್. ವಿ ವಕೀಲರು ಮತ್ತು ಕೆ. ಎಂ. ಎಂ. ಆರೋಪಿತರ ಪರವಾಗಿ*
*ಏನೂ ಇಲ್ಲವೆಂದು ನುಡಿದಿರುತ್ತಾರೆ.*

*ಮರುವಿಚಾರಣೆಃ ಇಲ್ಲ.*

*(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ದಿನಾಂಕ 17.03.2022 ರಂದು ಬೆರಳಚ್ಚುಗಾರ್ತಿಯಿಂದ ಬೆರಳಚ್ಚು ಮಾಡಿಸಲಾಯಿತು.)*

*ಓದಿ ಹೇಳಿ ಕೇಳಿ ಸರಿ ಇದೆ*

*ಸಹಿ/-*
*ಮೂರನೇ ಹೆಚ್ಚುವರಿ ಸತ್ರ ನ್ಯಾಯಾಧೀಶರು,*
*ಚಿಕ್ಕಬಳ್ಳಾಪುರ.*

*PW:09CW:14*